

# सरयू ॐ ಸರಯೂ

## ವಿದ್ಯಾಕೇಂದ್ರ ವಾರ್ತಾಪತ್ರ


SARAYU - Kannada Monthly Regn. No. KARKAN/2014/62363
February Vol. : 9 Issue : 11 5124/ಶುಭಕೃತ್ ಸಂವತ್ಸರ 2023 ಏಪ್ರಿಲ್ ಪುಟ 8 Rs. 10/-

Postal Regn No. PTR/136/2022-24
Licensed to Post without pre-payment
License No: SK/WPP/PTR/117/2022-24

ಶ್ರೀರಾಮ ವಿದ್ಯಾಕೇಂದ್ರದಲ್ಲಿ ಒಂದು ಹಂತದ ಶಿಕ್ಷಣವನ್ನು ಮುಗಿಸಿ ಮುಂದಿನ ಹಂತಕ್ಕೆ ತೆರಳುವ ವಿದ್ಯಾರ್ಥಿಗಳು ತಮ್ಮ ಕಿರಿಯರಿಗೆ ಜ್ಞಾನದ ಸಂಕೇತವಾದ ದೀಪವನ್ನು ಹಸ್ತಾಂತರಿಸುವ ಭಾವಪೂರ್ಣ ಕಾರ್ಯಕ್ರಮ ಈ ದೀಪ ಪ್ರದಾನ.

## ದೀಪ ಪ್ರದಾನ 2023

ಪ್ರೌಢಶಾಲೆ – 8.3.2023




ಪ್ರಾಥಮಿಕ ಶಾಲೆ – 29.3.2023











ವಿವರ ಪುಟ 5ರಲ್ಲಿದೆ...

ವಿವರ ಪುಟ 4ರಲ್ಲಿದೆ...

## ಭಾರತರತ್ನ ಸರ್ ಸಿ.ವಿ.ರಾಮನ್ ಜನ್ಮದಿನದ ಅಂಗವಾಗಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆ




ದಿನಾಂಕ 4.3.2023

ಸೀನಿಯರ್ ಎಜುಕೇಟರ್ ಮತ್ತು ಸೈನ್ಸ್ ರಿಸರ್ಚರ್ ಹಾಗೂ ಕಂಟೆಂಟ್ ಕ್ರಿಯೇಟರ್ ಶ್ರೀ ರಾಜೇಶ್. ಎಸ್ ರಾಷ್ಟ್ರೀಯ ವಿಜ್ಞಾನ ದಿನಾಚರಣೆಯನ್ನು ಕಾರಂಜಿ ಚಲಾಯಿಸುವ ಮೂಲಕ ಪ್ರಾಯೋಗಿಕವಾಗಿ ಉದ್ಘಾಟಿಸಿದರು. ದಕ್ಷಿಣ ಕನ್ನಡ ಜಿಲ್ಲಾ ಅಗ್ನಿಶಾಮಕ ದಳದ ಅಧಿಕಾರಿ ಶ್ರೀ ಭರತ್ ಕುಮಾರ್, ವಿ.ಆರ್ ಕ್ಲಿನಿಕ್, ಕೆ. ಸಿ ರೋಡ್ ಕಲ್ಲಡ್ಕ ಇಲ್ಲಿನ ವೈದ್ಯ, ಸಂಸ್ಥೆಯ ಹಿರಿಯ ವಿದ್ಯಾರ್ಥಿ ಡಾ। ಧನ್ವಿಶ್, ಸಂಸ್ಥೆಯ ಹಿರಿಯರು ಉಪಸ್ಥಿತರಿದ್ದರು.

## ಪ್ರೌಢಶಾಲಾ ವಿಭಾಗದ 'ಬೋಧಾಯನ' ಗಣಿತ ಪ್ರಯೋಗಾಲಯ ಉದ್ಘಾಟನೆ




'ಬೋಧಾಯನ' ಹೆಸರಿನ ಪ್ರೌಢಶಾಲಾ ವಿಭಾಗದ ಗಣಿತಶಾಸ್ತ್ರ ಪ್ರಯೋಗಾಲಯವನ್ನು ಸಾಮಾಜಿಕ ಕಾರ್ಯಕರ್ತೆ ಶ್ರೀಮತಿ ಪ್ರತಿಭಾ ಅರುಣ್ ಉದ್ಘಾಟಿಸಿ, "ಜೀವನದಲ್ಲಿ ವಿದ್ಯಾರ್ಥಿಗಳು ಕನಸನ್ನು ಕಾಣಬೇಕು. ಆ ಕನಸನ್ನು ಸಾಧಿಸಲು ಕಠಿಣ ಪರಿಶ್ರಮ ಪಡಬೇಕು. ಸಾಧಿಸಲು ಸಹಕರಿಸಿದ ಪ್ರತಿಯೊಬ್ಬರಿಗೂ ಧನ್ಯವಾದ ತಿಳಿಸಬೇಕು" ಎಂದರು. ಅಲ್ಲದೆ "ಇಲ್ಲಿ ಪ್ರಾಯೋಗಿಕ ರೀತಿಯಲ್ಲಿ ಗಣಿತವನ್ನು ಸರಳವಾಗಿ ಪರಿಣಾಮಕಾರಿಯಾಗಿ ಅರ್ಥೈಯಿಸಿಕೊಳ್ಳುವುದಕ್ಕೆ ಸಹಕಾರಿಯಾಗುವಂತಹ ಸಲಕರಣೆಗಳನ್ನು ಬಳಸಿಕೊಂಡಿರುವುದು ಶ್ಲಾಘನೀಯ" ಎಂದರು.

## ಶ್ರೀರಾಮ ಪದವಿ ಮಹಾವಿದ್ಯಾಲಯ ಬಿಕಾಂ 4ನೇ ರ್‍ಯಾಂಕ್



ಮಂಗಳೂರು ವಿಶ್ವವಿದ್ಯಾಲಯದ 2022–23ನೇ ಸಾಲಿನ ರ್‍ಯಾಂಕ್ ಪಟ್ಟಿಯಲ್ಲಿ ಕಲ್ಲಡ್ಕ ಶ್ರೀರಾಮ ಪದವಿ ಕಾಲೇಜಿನ ಬಿ.ಕಾಂ ವಿದ್ಯಾರ್ಥಿನಿ ಕು. ನಿರೀಕ್ಷಾ ಇವರು 4ನೇ ರ್‍ಯಾಂಕ್ ಗಳಿಸಿ ಸಂಸ್ಥೆಯ ಕೀರ್ತಿ ಹೆಚ್ಚಿಸಿದ್ದಾರೆ. ಇದು ವಿದ್ಯಾಸಂಸ್ಥೆಗೆ ಲಭಿಸಿದ 2ನೇ ರ್‍ಯಾಂಕ್ ಆಗಿದ್ದು, ಈ ಹಿಂದೆ ಬಿಕಾಂ ನಲ್ಲಿ 9ನೇ ರ್‍ಯಾಂಕ್ ಬಂದಿತ್ತು. 3500ಕ್ಕೆ 3329 ಅಂಕಗಳಿಸಿ ಶೇ 95.11 ಶ್ರೇಯಾಂಕ ಪಡೆದಿರುತ್ತಾಳೆ.

## ಪ್ರಾಥಮಿಕ ಶಾಲೆ




**ವಾರ್ಷಿಕ ಭಜನೆ 25.3.2023:** 1–7ನೇ ತರಗತಿ ವಿದ್ಯಾರ್ಥಿಗಳಿಂದ ಭಜನೆ ಹಾಗೂ ಫೆಬ್ರವರಿ, ಮಾರ್ಚ್ ಮತ್ತು ಎಪ್ರಿಲ್ ತಿಂಗಳಲ್ಲಿ ಹುಟ್ಟಿದ ಮಕ್ಕಳ ಸಾಮೂಹಿಕ ಹುಟ್ಟುಹಬ್ಬ. ಅಭಿವೃದ್ಧಿ ಸಮಿತಿಯ ಶ್ರೀ ಚಂದ್ರಶೇಖರ್ ಸಾಲ್ಯಾನ್ ಶ್ರೀ ಪದ್ಮನಾಭ ಪಿ.ಕೆ, ಗುತ್ತಿಗೆದಾರರಾದ ಶ್ರೀ ಪುಷ್ಪರಾಜ್ ಉಪಸ್ಥಿತರಿದ್ದರು.




**ಬೇಸಿಗೆ ಶಿಬಿರ ಉದ್ಘಾಟನೆ : 25.3.2023**

2022–23ನೇ ಶೈಕ್ಷಣಿಕ ವರ್ಷದ ಬೇಸಿಗೆ ಶಿಬಿರದ ಉದ್ಘಾಟನೆ ನಡೆಯಿತು. ಪ್ರಾಥಮಿಕ ವಿಭಾಗದ ಶಾಲಾಭಿವೃದ್ಧಿ ಸಮಿತಿ ಸದಸ್ಯರಾದ ಶ್ರೀ ದಯಾನಂದ ಗೋಳ್ತಮಜಲು ಹಾಗೂ ಕೋಶಾಧಿಕಾರಿಯಾದ ಶ್ರೀ ಜಯರಾಮ ಶೆಟ್ಟಿ ಉದ್ಘಾಟಿಸಿದ್ದಾರೆ.



**ಸಂಸ್ಕೃತ ಶಿಬಿರ–ಪೂರ್ವಭಾವಿ ಬೈಠಕ್: 30.3.23**

ಉಪ್ಪಳದ ಕೊಂಡೆಯೂರಿನಲ್ಲಿ ನಡೆಯುವ ಸಂಸ್ಕೃತ ಶಿಬಿರದಲ್ಲಿ ಭಾಗವಹಿಸುವ ವಿದ್ಯಾರ್ಥಿಗಳೊಂದಿಗೆ ಪ್ರೌಢಶಾಲೆಯ ಸಂಸ್ಕೃತ ಅಧ್ಯಾಪಕರಾದ ಶ್ರೀ ಜಯರಾಮ ಹಾಗೂ ಪ್ರಾಥಮಿಕ ವಿಭಾಗದ ಸಂಸ್ಕೃತ ಅಧ್ಯಾಪಕರಾದ ಶ್ರೀಮತಿ ಅನ್ನಪೂರ್ಣ ಎನ್ ಭಟ್ ಹಾಗೂ ಅಧ್ಯಾಪಕರಾದ ಸುಮಂತ್ ಆಳ್ವ ಪೂರ್ವಭಾವಿ ಬೈಠಕ್ ನಡೆಸಿದರು.

## ಪ್ರೌಢಶಾಲೆ



**ಶುದ್ಧ ಕುಡಿಯುವ ನೀರಿನ ಘಟಕ ಉದ್ಘಾಟನೆ 30.03.23**

ರೋಟರಿ ಕ್ಲಬ್ ಬಂಟ್ವಾಳ ಇವರ ವತಿಯಿಂದ ಶುದ್ಧ ಕುಡಿಯುವ ನೀರಿನ ಘಟಕ ಉದ್ಘಾಟನೆ ನಡೆಯಿತು. ರೋಟರಿ ಕ್ಲಬ್‌ನ ಜಿಲ್ಲಾ ಗವರ್ನರ್ ಆಗಿರುವ ಶ್ರೀ ಪ್ರಕಾಶ್ ಕಾರಂತ್ ನರಿಕೊಂಬು ಇವರು ದೀಪ ಬೆಳಗಿಸಿ ಉದ್ಘಾಟಿಸಿ ಈ ವಿದ್ಯಾಸಂಸ್ಥೆಗೆ ನೀಡಿದ ಕೊಡುಗೆ ಸಾವಿರಾರು ವಿದ್ಯಾರ್ಥಿಗಳಿಗೆ ಉಪಯೋಗವಾಗುವಂಹದು. ಮುಂದಿನ ದಿನಗಳು ಬೇಸಗೆಯ ದಿನಗಳಾದ್ದರಿಂದ ಶುದ್ಧ ನೀರಿನ ಸೇವನೆ ಇಂದಿನ ಅಗತ್ಯ ಇದನ್ನು ಮನಗಂಡು ಈ ಘಟಕವನ್ನು ನೀಡಿದ್ದೇವೆ. ಈ ಸಂಸ್ಥೆ ಮಾಡುತ್ತಿರುವ ಕೆಲಸ ಶ್ಲಾಘನೀಯ ಅದಕ್ಕಾಗಿ ಈ ಸಂಸ್ಥೆಯೊಂದಿಗೆ ನಾವಿದ್ದೇವೆ ಎಂದರು. ಭದ್ರಾ ಗ್ಯಾಸ್ ಏಜೆನ್ಸಿ ಮಾಲಕರಾದ



ಶ್ರೀ ಮಂಜುನಾಥ ಆಚಾರ್ಯ, ತಾಲೂಕು ರೋಟರಿ ಕ್ಲಬ್‌ನ ಅಧ್ಯಕ್ಷರಾದ ಶ್ರೀ ಪುಷ್ಪರಾಜ ಹೆಗಡೆ, ಕಾರ್ಯದರ್ಶಿ ಶ್ರೀ ಭಾನುಶಂಕರ ಬನ್ನಿಂತಾಯ, ಜಿಲ್ಲಾ ಕಾರ್ಯದರ್ಶಿ ಶ್ರೀ ನಾರಾಯಣ ಹೆಗಡೆ, ಜಿಲ್ಲಾ ಚೈರ್ ಮ್ಯಾನ್ ಶ್ರೀ ಸಂಜೀವ ಪೂಜಾರಿ, ಪ್ರೌಢಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಗೋಪಾಲ್. ಎಂ ಉಪಸ್ಥಿತರಿದ್ದರು.



ಎಸ್.ಎಸ್.ಎಲ್.ಸಿ ಪರೀಕ್ಷೆ ನಿಮಿತ್ತ ವಿವಿಧ ಶಾಲೆಗಳ ಶಿಕ್ಷಕರ ಸಭೆ 29.03.2023 ರಂದು ನಡೆಸಲಾಯಿತು. ಸಭೆಯನ್ನು ಶ್ರೀರಾಮ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಗೋಪಾಲ್.ಎಮ್ ಮಾಹಿತಿ ನೀಡಿದರು.




**ಅತಿಥಿಗಳ ಭೇಟಿ 13–03–2023**

ದುಬೈನ ನ್ಯೂ ಏಜ್ ಇಂಟರ್‌ನ್ಯಾಷನಲ್ ಇದರ ಆಡಳಿತ ನಿರ್ದೇಶಕರಾದ ಶ್ರೀ ಪ್ರಸಾದ್ ಶೆಟ್ಟಿ, ರಾಜ್ಯ ನೀರಾವರಿ ಇಲಾಖೆಯ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಶ್ರೀ ಅರುಣ ಭಂಡಾರಿ ಹಾಗು ಅವರ ಧರ್ಮಪತ್ನಿ ಶ್ರೀಮತಿ ವರ್ಷ ಭಂಢಾರಿ, ಶ್ರೀ ಬಾಲಕೃಷ್ಣ ಭಂಡಾರಿ. ಮುಂಬೈ, ಭೇಟಿ ನೀಡಿದರು, ಈ ವೇಳೆ ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷರು ಡಾ ಪ್ರಭಾಕರ ಭಟ್ ಕಲ್ಲಡ್ಕ, ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಗೋಪಾಲ್. ಎಂ ಉಪಸ್ಥಿತರಿದ್ದರು. ಅತಿಥಿಗಳನ್ನು ಹಿರಿಯ ಶಿಕ್ಷಕರಾದ ಜಿನ್ನಪ್ಪ ಶ್ರೀಮಾನ್ ಸ್ವಾಗತಿಸಿದರು.

## ಸೆಕೆಂಡರಿ ಸ್ಕೂಲ್



**23.03.2023 ಮತ್ತು 24.03.2023 ತರಬೇತಿ ಶಿಬಿರ**

ಅಟಲ್ ಟಿಂಕರಿಂಗ್ ಲ್ಯಾಬ್‌ನಲ್ಲಿ ಶ್ರೀರಾಮ ಸೆಕೆಂಡರಿ ಸ್ಕೂಲ್‌ನ ವಿದ್ಯಾರ್ಥಿಗಳಿಗೆ ತರಬೇತಿ ಶಿಬಿರವನ್ನು ನಡೆಸಲಾಯಿತು. ಆ ಮೂಲಕ ಬೇಸಗೆ ರಜಾ ದಿನಗಳನ್ನು ಉಪಯುಕ್ತಗೊಳಿಸುವ ಕಾರ್ಯ ನಡೆಯಿತು.



**ಸೈಬರ್ ಕ್ರೈಮ್ ಮಾಹಿತಿ 27.03.2023**

ಸೈಬರ್ ಕ್ರೈಮ್ ಕುರಿತಾಗಿ ಮಾಹಿತಿ ಕಾರ್ಯಾಗಾರವನ್ನು ಮಂಗಳೂರು ಟ್ರಾಫಿಕ್ ವಿಭಾಗದ ಎಸಿಪಿ ಶ್ರೀಮತಿ ಗೀತಾ ಕುಲಕರ್ಣಿ ಅವರು ನಡೆಸಿಕೊಟ್ಟರು. ಡಾ॥ಕಮಲ ಪ್ರಭಾಕರ್ ಭಟ್, ಉಪಪ್ರಾಚಾರ್ಯರು ಉಪಸ್ಥಿತರಿದ್ದರು.



**ದೈವಾರಾಧನೆಯ ಮಾಹಿತಿ 30.03.2023**

ತುಳುನಾಡ ದೈವಾರಾಧನೆಯ ಬಗ್ಗೆ ವಿದ್ಯಾರ್ಥಿಗಳಿಗೆ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರು ಮತ್ತು ಬಲೆಬರೆಕ ತುಳುಬರವು ಕಾರ್ಯಕ್ರಮದ ನಿರೂಪಕರಾದಂತಹ ಶ್ರೀ ದಯಾನಂದ. ಜಿ.ಕತ್ತಲ್‌ಸಾರ್ ವಿವರಿಸಿದರು.

# ಸುಭಾಷಿತ ಮಂಜರಿ

**ಯಾವದಸ್ಖಲಿತಂ ತಾವತ್**
**ಸುಖಂ ಯಾತಿ ಸಮೇ ಪಥಿಃ ।**
**ಸ್ಖಲಿತೇ ಚ ಸಮುತ್ಪನ್ನೇ**
**ವಿಷಮಂ ಚ ಪದೇ ಪದೇ ॥**

**(ಪಂಚತಂತ್ರ)**

**ಸರಿಯಾದ ದಾರಿಯಲ್ಲಿ ಹೋಗುತ್ತ, ಎಷ್ಟರವರೆಗೆ ಜಾರುವುದಿಲ್ಲವೋ ಅಷ್ಟರವರೆಗೆ ಮಾನವನು ಸುಖವಾಗಿ ಹೋಗುತ್ತಾನೆ. ಜಾರುವಿಕೆ ಉಂಟಾದುದೇ ಆದರೆ ಹೆಜ್ಜೆ ಹೆಜ್ಜೆಗೂ ದುಃಖವೇ.**

## ಸಂಪಾದಕೀಯ

**ಆತ್ಮೀಯ ಓದುಗರೇ,**

**ವಿದ್ಯಾಸಂಸ್ಥೆಯ ಈ ಶೈಕ್ಷಣಿಕ ವರ್ಷ ಎಂದಿನಂತೆ ದೀಪಪ್ರದಾನ ಕಾರ್ಯಕ್ರಮದೊಂದಿಗೆ ಮುಕ್ತಾಯಗೊಂಡಿದೆ. ಆದರೂ ಸಂಸ್ಥೆಯ ಚಟುವಟಿಕೆಗಳು ಒಂದಿಲ್ಲೊಂದು ರೀತಿಯಲ್ಲಿ ನಡೆಯುತ್ತಲೇ ಇರುತ್ತದೆ. ವಿಶೇಷವಾಗಿ ಬೇಸಿಗೆ ಶಿಬಿರಗಳು, ಸಂಸ್ಕೃತಿ ಶಿಕ್ಷಣ ಶಿಬಿರಗಳು, ವಿದ್ಯಾ ವಿಕಾಸ ವರ್ಗಗಳು ವಿವಿಧ ವಿಭಾಗಗಳಲ್ಲಿ ಅವರವರ ಸ್ತರ ವಯೋಮಾನಕ್ಕನುಗುಣವಾಗಿ ಆಯೋಜಿಸಲಾಗುತ್ತದೆ. ಜೊತೆಗೆ ಗ್ರಾಮಗಳನ್ನು ತಲುಪುವ ದೃಷ್ಟಿಯಿಂದ ಸ್ಥಾನೀಯ ಪಾಲಕರ ಸಮಾವೇಶಗಳನ್ನು ಅನೇಕ ಕಡೆ ಆಯೋಜನೆ ಮಾಡಿದೆ. ಅಂತೆಯೇ ಮುಂದಿನ ಶೈಕ್ಷಣಿಕ ಯೋಜನೆಗಳಾದ ಕಟ್ಟಡ ನಿರ್ಮಾಣ, ಪೀಠೋಪಕರಣ, ಗ್ರಂಥಾಲಯ, ದುರಸ್ತಿ ಕಾರ್ಯಗಳು, ನಡೆಯುತ್ತಲೇ ಇರುತ್ತವೆ. ಇವೆಲ್ಲವೂ ಸರಯೂ ನಲ್ಲಿ ವರದಿ ಆಗುತ್ತಿಲ್ಲವಾದ್ದರಿಂದ ಈ ಮೂಲಕ ಸಂಕ್ಷೇಪಿಸಿದೆ.**

**ವಂದನೆಗಳೊಂದಿಗೆ**

**ಸಂಪಾದಕ ಬಳಗ**


## ಸಂಪಾದಕೀಯ ಮಂಡಳಿ

**ಸಂಪಾದಕರು, ಮುದ್ರಕರು ಹಾಗೂ ಪ್ರಕಾಶಕರು :**
ನಾರಾಯಣ ಸೋಮಯಾಜಿ
ಅಧ್ಯಕ್ಷರು, ಶ್ರೀರಾಮ ವಿದ್ಯಾಕೇಂದ್ರ
**ಕಾರ್ಯನಿರ್ವಾಹಕ ಸಂಪಾದಕರು :**
ಕೃಷ್ಣಪ್ರಸಾದ ಕಾಯರ್‌ಕಟ್ಟೆ
**ಸಹಸಂಪಾದಕರು :**
ಪ್ರೀತಿಕಾ (ಶಿಶುಮಂದಿರ)
ಚೈತ್ರ (ಪ್ರಾಥಮಿಕ ಶಾಲೆ)
ರಾಜೇಶ್ವರಿ (ಪ್ರೌಢಶಾಲೆ)
ಶ್ವೇತಾ (ಸೆಕೆಂಡರಿ ಸ್ಕೂಲ್)
ಗೋವಿಂದ ನಾರಾಯಣ (ಪಿಯುಸಿ)
ಪ್ರಸನ್ನಾ (ಪದವಿ)
**ವ್ಯವಸ್ಥಾಪಕ ಸಂಪಾದಕರು :** ಕುಶಾಲಪ್ಪ ಅಮ್ಟೂರು


## ಶ್ರೀರಾಮ ಶಿಶುಮಂದಿರದ ಶ್ರೀಲಕ್ಷ್ಮೀ ಭೋಜನ ಶಾಲೆ



ಶ್ರೀರಾಮ ಶಿಶುಮಂದಿರದ ಮಕ್ಕಳಿಗಾಗಿ ನವೀಕರಣಗೊಂಡ ಶ್ರೀಲಕ್ಷ್ಮೀ ಭೋಜನ ಶಾಲೆ 27.03.23ರಂದು ಡಾ। ಪ್ರಭಾಕರ್ ಭಟ್ ಕಲ್ಲಡ್ಕ ದೀಪ ಬೆಳಗಿಸಿ ಉದ್ಘಾಟಿಸಿದರು. ನಂತರ ಮಕ್ಕಳ ಜೊತೆಯಲ್ಲಿಯೇ ಕುಳಿತು ಭೋಜನ ಸವಿದರು.

## ಚಟುವಟಿಕೆ ವೀಕ್ಷಣೆ



11.3.23ರಂದು ಶ್ರೀರಾಮ ಶಿಶುಮಂದಿರ ಅಲೆಕಿ, ಮುಗೆರಡ್ಕದ ಮಕ್ಕಳು, ಪಾಲಕರು, ಆಡಳಿತ ಮಂಡಳಿಯ ಸದಸ್ಯರು ಶಿಶುಮಂದಿರ, ಪೂರ್ವಗುರುಕುಲದ ವೀಕ್ಷಣೆಗಾಗಿ ಆಗಮಿಸಿದ್ದರು. ಶ್ರೀಮತಿ ರೂಪಕಲಾ ಮಾತಾಜಿ ಶಿಕ್ಷಣವನ್ನು ವಿವರಿಸಿದರು.

## ಶ್ರೀರಾಮ ಮಂದಿರ ಕಲ್ಲಡ್ಕದಲ್ಲಿ ವಿದ್ಯಾರ್ಥಿಗಳಿಂದ ಶ್ರೀರಾಮನಿಗೆ ಸೀಯಾಳ ಅಭಿಷೇಕ ಹನುಮಂತನಿಗೆ ತೈಲಾಭಿಷೇಕ 7.03.2023



ನಮ್ಮ ವಿದ್ಯಾಸಂಸ್ಥೆಯ ಎಲ್ಲಾ ಚಟುವಟಿಕೆಗಳ ಪ್ರೇರಕ ಶಕ್ತಿಯಾದ ಕಲ್ಲಡ್ಕದ ಶ್ರೀರಾಮ ಮಂದಿರ ಕಲ್ಲಡ್ಕದಲ್ಲಿ ಶ್ರೀರಾಮನಿಗೆ ಸೀಯಾಳ ಅಭಿಷೇಕ ಮತ್ತು ಹನುಮಂತನಿಗೆ ತೈಲಾಭಿಷೇಕವು ನೆರವೇರಿತು. ಈ ಕಾರ್ಯಕ್ರಮದಲ್ಲಿ ವಿದ್ಯಾಕೇಂದ್ರದ ಎಲ್ಲಾ ವಿದ್ಯಾರ್ಥಿಗಳು, ಶಿಕ್ಷಕರು, ಶಿಕ್ಷಕೇತರ ಸಿಬ್ಬಂದಿಗಳು ಶ್ರದ್ಧಾ-ಭಕ್ತಿಯಿಂದ ಪಾಲ್ಗೊಂಡರು. ಅಲ್ಲದೇ ಭಜನಾ ಕಾರ್ಯಕ್ರಮವನ್ನು ನಡೆಸಿಕೊಟ್ಟರು.

**ಸಾಮೂಹಿಕ ಹುಟ್ಟುಹಬ್ಬ 30.03.2023**

ಮಾರ್ಚ್, ಏಪ್ರಿಲ್, ಮೇ ತಿಂಗಳಲ್ಲಿ ಹುಟ್ಟಿದ 52 ಮಕ್ಕಳ ಹುಟ್ಟುಹಬ್ಬ ಆಚರಿಸಲಾಯಿತು. ಶ್ರೀರಾಮ ಶಿಶುಮಂದಿರದ ಆಡಳಿತ ಮಂಡಳಿ ಸದಸ್ಯೆಯಾದ ಶ್ರೀಮತಿ ಶುಭಲಕ್ಷ್ಮೀ ಹುಟ್ಟುಹಬ್ಬದ ಮಹತ್ವ ಮತ್ತು ಶ್ರೀರಾಮ ನವಮಿಯ ಬಗ್ಗೆ ತಿಳಿಸಿದರು.

ಮಕ್ಕಳು ಹಣತೆ ಬೆಳಗಿಸಿ ಭಾರತ ಮಾತೆಗೆ ಪುಷ್ಪಾರ್ಚನೆಗೈದ ನಂತರ ಆಡಳಿತ ಮಂಡಳಿ ಸದಸ್ಯೆಯರು ಮಕ್ಕಳಿಗೆ ಆರತಿ ಮಾಡಿ, ಅಕ್ಷತೆ ಹಾಕಿ ತಿಲಕದಾರಣೆ ಮಾಡಿ ಆಶೀರ್ವದಿಸಿ ಸಿಹಿ ತಿನ್ನಿಸಿ ಶುಭ ಹಾರೈಸಿದರು. ಈ ಕಾರ್ಯಕ್ರಮಕ್ಕೆ 144 ಮಕ್ಕಳು ಆಡಳಿತ ಮಂಡಳಿ ಸದಸ್ಯೆಯರು, 39 ಪಾಲಕರು ಮತ್ತು ಮಾತಾಜಿಯರು ಉಪಸ್ಥಿತರಿದ್ದರು.

**ಸರಸ್ವತಿ ಶಿಶು ಮಂದಿರ ಕೊಪ್ಪಲಕೋಡಿ 22.3.23**

ಯುಗಾದಿ ಹಬ್ಬದ ಪ್ರಯುಕ್ತ 100 ಮನೆಗಳಿಗೆ ಬೇವು ಬೆಲ್ಲ ಹಂಚಿ ಶುಭಾಶಯ ತಿಳಿಸಿದೆವು.

**ಸ್ಥಾನೀಯ ಬೈಠಕ್ 3.3.2023**

ಸರಸ್ವತಿ ಶಿಶು ಮಂದಿರ ಕೊಪ್ಪಲಕೋಡಿಯಲ್ಲಿ ಸ್ಥಾನೀಯ ಬೈಠಕ್ ನಡೆಯಿತು. ಪುತ್ತೂರು ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷರು ಡಾ॥ ಪ್ರಭಾಕರ್ ಭಟ್ ಕಲ್ಲಡ್ಕ ಹಾಗೂ ವಿದ್ಯಾಕೇಂದ್ರದ ಸಂಚಾಲಕರಾಗಿರುವ ಶ್ರೀ ವಸಂತಮಾಧವ ಉಪಸ್ಥಿತರಿದ್ದರು.

ಡಾ॥ ಪ್ರಭಾಕರ್ ಭಟ್ ಕಲ್ಲಡ್ಕ ಇವರು ನಮ್ಮ ಮಕ್ಕಳಿಗೆ ದೇಶ ಧರ್ಮ ಸಂಸ್ಕೃತಿ ತಿಳಿಯಬೇಕು. ಸರಸ್ವತಿ ಆರಾಧನೆಯಿಂದಲೇ ಶಾಲೆ ಪ್ರಾರಂಭವಾಗುತ್ತದೆ. ತಾಯಿ ದೇವರು ಎಂಬ ಚಿಂತನೆ ಮಕ್ಕಳಲ್ಲಿ ಆಗಬೇಕು ವಿವಿಧ ಕಾರ್ಯಕ್ರಮಗಳು ನಡೆಯುತ್ತಿರುತ್ತದೆ. ಹೆಚ್ಚು ಹೆಚ್ಚು ಮನೆಗಳಲ್ಲಿ ಹಿಂದುತ್ವದ ಚಿಂತನೆ ಬೆಳೆಯಬೇಕು ಎಂದರು.

## ಪ್ರಾಥಮಿಕ ಶಾಲೆ

**ರಾಷ್ಟ್ರೀಯ ವಿಜ್ಞಾನ ದಿನಾಚರಣೆಯಲ್ಲಿ ಭಾಗಿ: 4.3.23**

ಶ್ರೀರಾಮ ಪ್ರೌಢಶಾಲೆಯಲ್ಲಿ ನಡೆದ ರಾಷ್ಟ್ರೀಯ ವಿಜ್ಞಾನ ದಿನಾಚರಣೆಯಲ್ಲಿ 27 ವಿದ್ಯಾರ್ಥಿಗಳು ಭಾಗವಹಿಸಿ, ವಿಜ್ಞಾನ ರಸಪ್ರಶ್ನೆಯಲ್ಲಿ 7ನೇ ತರಗತಿಯ ಅಂಕಿತ, ಪವನ್ ಈಶಾನ್ ಪ್ರಥಮ ಸ್ಥಾನ, ಗಣಕ ವಿಜ್ಞಾನದಲ್ಲಿ ರಮ್ಯ ಪ್ರಥಮ ಸ್ಥಾನ ಮತ್ತು ವಸ್ತುಗಳನ್ನು ಗುರುತಿಸುವಿಕೆಯಲ್ಲಿ ಅನನ್ಯ ಪ್ರಥಮ ಸ್ಥಾನ ಪಡೆದಿದ್ದಾರೆ.

**ಜಂತುಹುಳ ನಿವಾರಣಾ ದಿನ : 13.3.2023**

ಜಂತು ಹುಳ ನಿವಾರಣಾ ದಿನದ ಪ್ರಯುಕ್ತ ಎಲ್ಲಾ ವಿದ್ಯಾರ್ಥಿಗಳಿಗೆ ಜಂತು ಹುಳ ಮಾತ್ರೆಯನ್ನು ವಿತರಿಸಲಾಯಿತು.

**ದೀಪ ಪ್ರದಾನ 29.3.2023:** ವೇದವ್ಯಾಸ ಧ್ಯಾನ ಮಂದಿರದಲ್ಲಿ 7ನೇ ತರಗತಿಯ ಬೀಳ್ಕೊಡುಗೆ ಕಾರ್ಯಕ್ರಮವಾದ "ದೀಪಪ್ರದಾನ" ನಡೆಯಿತು. 7ನೇ ತರಗತಿಯ ವಿದ್ಯಾರ್ಥಿಗಳು ಭಾರತ ಮಾತೆಗೆ ಪುಷ್ಪಾರ್ಚನೆಗೈದು, ತಿಲಕಧಾರಣೆ ಮಾಡಿಸಿ, ಹಿರಿಯರಿಂದ ಆಶೀರ್ವಾದ ಪಡೆದುಕೊಂಡರು. 6ನೇ ವಿದ್ಯಾರ್ಥಿಗಳು 7ನೇ ತರಗತಿ ವಿದ್ಯಾರ್ಥಿಗಳಿಗೆ ಪುಷ್ಪ ಪ್ರಧಾನ ಮಾಡಿದರು. 7ನೇ ತರಗತಿಯ ವಿದ್ಯಾರ್ಥಿಗಳು ಈ ವಿದ್ಯಾ ದೇಗುಲದಲ್ಲಿ ತಾವು ಕಳೆದ ಸಂತೋಷದ ಮಧುರ ಕ್ಷಣಗಳ ಸವಿನೆನಪುಗಳನ್ನು ಹಂಚಿಕೊಂಡರು. 6ನೇ ತರಗತಿಯ ವಿದ್ಯಾರ್ಥಿಯಾದ ಧಾತ್ರಿ ಪ್ರೇರಣಾ ಗೀತೆಯನ್ನು ಹಾಡಿದರು. ದೀಪ ಎಂದರೆ ಶಾಂತಿ, ಸಮೃದ್ಧಿ, ಬೆಳಕು, ಆರೋಗ್ಯ, ಪ್ರಖರತೆ. ಹೀಗೆ ದೀಪ ಜೀವನದ ಒಂದು ಸಕಾರಾತ್ಮಕ ಬೆಳವಣಿಗೆ . ಅದು ಜ್ಞಾನದ ಸಂಕೇತವೂ ಹೌದು. ಇಂತಹ ದೀಪವು ಪ್ರತಿಯೊಬ್ಬರ ಜೀವನಕ್ಕೊಂದು ಸಂತೋಷ, ನೆಮ್ಮದಿ, ಶಾಂತಿಯನ್ನು ತರಲಿ ಎಂದು ಆಶಿಸುತ್ತಾ 7ನೇ ತರಗತಿಯ ವಿದ್ಯಾರ್ಥಿಗಳು ಕಿರಿಯ ವಿದ್ಯಾರ್ಥಿಗಳಿಗೆ ದೀಪ ಪ್ರದಾನ ಮಾಡಿದರು.

ವೇದಿಕೆಯಲ್ಲಿ ಬೆಂಗಳೂರು ವಿಶ್ವವಾಣಿ ಪತ್ರಿಕೆಯ ಪ್ರಧಾನ ಸಂಪಾದಕರಾದ ಶ್ರೀ ವಿಶ್ವೇಶ್ವರ ಭಟ್, ಪುತ್ತೂರು ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ ಶ್ರೀ ಡಾ। ಪ್ರಭಾಕರ್ ಭಟ್ ಕಲ್ಲಡ್ಕ, ಕೋಲಾರ ಜಿಲ್ಲೆಯ ಮಾನ್ಯ ಲೋಕಸಭಾ ಸದಸ್ಯರಾದ ಶ್ರೀ ಎಸ್ ಮುನಿಸ್ವಾಮಿ ಹಾಗೂ ಅವರ ಧರ್ಮಪತ್ನಿ ಶ್ರೀಮತಿ ಶೈಲಜಾ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಭಾರತೀಯ ಜನತಾ ಪಕ್ಷದ ಪ್ರಕೋಷ್ಠ ಸಂಚಾಲಕರಾದ ಶ್ರೀ ಧೀರಜ್ ಮುನಿರಾಜ್, ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ಹೆಚ್.ಜಿ. ಚಂದ್ರಶೇಖರ, ತುಮಕೂರು ಕಲ್ಕಿ ರೈಸ್ ಕಾರ್ನರ್ ಮಾಲಕರಾದ ಶ್ರೀ ಆರ್. ಎಲ್. ರಮೇಶ್ ಬಾಬು, ಕರ್ನಾಟಕ ಸರಕಾರ ಇ–ಆಡಳಿತ ಇಲಾಖೆಯ ಯೋಜನಾ ನಿರ್ದೇಶಕರಾದ ಶ್ರೀ ವರಪ್ರಸಾದ್ ರೆಡ್ಡಿ, ಮಂಗಳೂರು ಮಾರುಕಟ್ಟೆ ಅಭಿವೃದ್ಧಿ ವಿಭಾಗದ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ಕೆ.ಬಿ. ಕೀರ್ತನ್ ಕುಮಾರ್, ಮಣಿಪಾಲ ಮಹಾಮಾಯಾ ಫೌಂಡೇಶನ್‌ನ ಕಾರ್ಯದರ್ಶಿಯಾದ ಕೆ. ಉಷಾ ಎಸ್ ಪೈ, ಬೆಂಗಳೂರಿನ ಉದ್ಯಮಿಯಾದ ಚೈತನ್ಯ ಆದಿಕೇಶವಲು, ಖ್ಯಾತ ಅಂಕಣಕಾರರಾದ ಶ್ರೀ ಜಿತೇಂದ್ರ ಕುಂದೇಶ್ವರ, ಮಂಗಳೂರು ಪ್ಲಾಂಟ್–ಟೆಕ್ ಇಂಡಸ್ಟ್ರಿಯಲ್ ಸರ್ವಿಸಸ್ ಲಿಮಿಟೆಡ್ ಸಿ.ಇ.ಓ ಶ್ರೀ ಅಭಯ್ ತಾರ್ತೆ, ಶ್ರೀರಾಮ ವಿದ್ಯಾಕೇಂದ್ರದ ಅಧ್ಯಕ್ಷರಾದ ಶ್ರೀ ನಾರಾಯಣ ಸೋಮಯಾಜಿ, ಸಂಚಾಲಕರಾದ ಶ್ರೀ ವಸಂತ ಮಾಧವ, ಹಾಗೂ ಮುಖ್ಯೋಪಾಧ್ಯಾಯರಾದ ಶ್ರೀ ರವಿರಾಜ್ ಕಣಂತೂರು, ರಾಷ್ಟ್ರ ಸೇವಿಕಾ ಸಮಿತಿಯ ಕಾರ್ಯಕಾರಿಣಿ ಸದಸ್ಯರಾದ ಶ್ರೀಮತಿ ಡಾ।ಕಮಲಾ ಪ್ರಭಾಕರ್ ಭಟ್ ಕಲ್ಲಡ್ಕ, ಆಡಳಿತ ಮಂಡಳಿಯ ಸದಸ್ಯರು, ಶಾಲಾಭಿವೃದ್ಧಿ ಸಮಿತಿಯ ಸದಸ್ಯರು, ಮಾತೃಭಾರತಿ ಸದಸ್ಯರು ಉಪಸ್ಥಿತರಿದ್ದರು.

**ಕೊಡುಗೆ ಪ್ರದಾನ : 29.3.2023**



7ನೇ ತರಗತಿಯ ವಿದ್ಯಾರ್ಥಿಗಳು ಪ್ರೌಢಶಾಲೆಗೆ ತೆರಳುವ ವೇಳೆ, ತಾನು ಕಲಿತಂತಹ ಶಾಲೆಗೆ ಕೊಡುಗೆ ನೀಡುವ ಉದ್ದೇಶದಿಂದ ಬೆಂಚ್, ಡೆಸ್ಕ್‌ಗಳನ್ನು ಕೊಡುಗೆಯಾಗಿ ನೀಡಿದರು. ಈ ಸಂದರ್ಭದಲ್ಲಿ ಶ್ರೀಯುತ ಡಾ। ಪ್ರಭಾಕರ್ ಕಲ್ಲಡ್ಕ ಹಾಗೂ ಶ್ರೀಮತಿ ಡಾ। ಕಮಲಾ ಪ್ರಭಾಕರ್ ಭಟ್, ಮುಖ್ಯೋಪಾಧ್ಯಾಯರಾದ ಶ್ರೀ ರವಿರಾಜ್ ಕಣಂತೂರು ಮತ್ತು ಸುಮಂತ್ ಆಳ್ವ ಎಂ ಉಪಸ್ಥಿತರಿದ್ದರು.

**ನರಕಾಸುರ ಮೋಕ್ಷ ಯಕ್ಷಗಾನ ಪ್ರಸಂಗ ಪ್ರದರ್ಶನ 31.3.2023**

ಯಕ್ಷಾಮೃತ ಯಕ್ಷಗಾನ ನಾಟ್ಯ ತರಗತಿ ವತಿಯಿಂದ ಪ್ರಾಥಮಿಕ ವಿಭಾಗದ ವಿದ್ಯಾರ್ಥಿಗಳಿಂದ ನರಕಾಸುರ ಮೋಕ್ಷ ಎಂಬ ಯಕ್ಷಗಾನ ಪ್ರಸಂಗ ಪ್ರದರ್ಶನ ನಡೆಯಿತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀಯುತ ಡಾ। ಪ್ರಭಾಕರ್ ಭಟ್ ಕಲ್ಲಡ್ಕ ಇವರು ವಹಿಸಿದ್ದರು. ವಿದ್ಯಾಕೇಂದ್ರದ ಕೋಶಾಧಿಕಾರಿಯಾದ ಶ್ರೀ ಸತೀಶ್ ಭಟ್ ಶಿವಗಿರಿ ಉಪಸ್ಥಿತರಿದ್ದರು. ನಿರ್ದೇಶನ ಹಾಗೂ ಯಕ್ಷಗಾನ ತರಬೇತುದಾರರಾಗಿ ಶ್ರೀ ಗಣೇಶ್ ಆಚಾರ್ಯ, ಭಾಗವತಿಕೆಯನ್ನು ಶ್ರೀ ಜಯರಾಮ ಅಡೂರು, ಚೆಂಡೆ ಯೋಗೀಶ್ ಆಚಾರ್ಯ

ಕೊಂದಲಕೋಡಿ, ಮದ್ದಳೆ ರಾಮದಾಸ ಶೆಟ್ಟಿ ವಗೆನಾಡು ಹಾಗೂ ಚಕ್ರತಾಳದಲ್ಲಿ ಮಧುಚಂದ್ರ ಪಾಟಾಳಿ ಸಹಕರಿಸಿಸಿದರು. ನರಕಾಸುರನಾಗಿ 7ನೇ ತರಗತಿಯ ವೀಕ್ಷಿತ್, ನಕ್ರತುಂಡಿಯಾಗಿ 7ನೇ ತರಗತಿಯ ಸಾತ್ವಿಕ್ ಜಿ, ಮುರಾಸುರನಾಗಿ 7ನೇ ತರಗತಿಯ ಶ್ರವಣ್, ದೇವೇಂದ್ರನಾಗಿ 6ನೇ ತರಗತಿಯ ಧನ್ಯ, ದೂತನಾಗಿ 7ನೇ ತರಗತಿಯ ಶ್ರೀಹರಿ, ನಾರದನಾಗಿ 5ನೇ ತರಗತಿಯ ನಿನಾದ್ ಕೈರಂಗಳ, ಜಯಂತ್‌ನಾಗಿ 5ನೇ ತರಗತಿಯ ಕಾರ್ತಿಕೇಯ, ಕೃಷ್ಣನಾಗಿ 6ನೇ ತರಗತಿಯ ನಿಶಾ, ಸತ್ಯಭಾಮಳಾಗಿ 6ನೇ ತರಗತಿಯ ದಿಶಾ, ಅಗ್ನಿಯಾಗಿ 5ನೇ ತರಗತಿಯ ಲಕ್ಷ್ಯ, ವಾಯುವಾಗಿ 6ನೇ ತರಗತಿಯ ಪೂರ್ವಿಕಾ, ಕುಬೇರನಾಗಿ 5ನೇ ತರಗತಿಯ ಸುಪ್ರೀತ, ನಿರುತಿಯಾಗಿ 5ನೇ ತರಗತಿಯ ತನ್ವಿ ಆರ್, ಯಮನಾಗಿ 6ನೇ ತರಗತಿಯ ಮೋಕ್ಷಿತ, ವರುಣನಾಗಿ 6ನೇ ತರಗತಿಯ ಪ್ರಕೃತಿ. ಈಶಾನನಾಗಿ 5ನೇ ತರಗತಿಯ ಸೃಷ್ಟಿ ಹಾಗೂ ನರಕಾಸುರನ ಬಲ ಪಾತ್ರಧಾರಿಯಾಗಿ ವಿದ್ಯಾರ್ಥಿಗಳಾದ ಚಿಂತನ್, ಪ್ರಮುಲ್‌ರಾಜ್, ಚಿರಂತ್, ವೈಭವ್, ಪೂಜನ್, ಮನೋಜ್, ಪ್ರಣೀತ್, ಅನ್ವಿತ್‌ರಾಜ್, ಡಿವೇಶ್, ಕೀರ್ತನ್ ಯಕ್ಷಗಾನದಲ್ಲಿ ಭಾಗವಹಿಸಿದರು. 3 ಮತ್ತು 4 ನೇ ತರಗತಿ ವಿದ್ಯಾರ್ಥಿಗಳ ರಂಗಪ್ರವೇಶವೂ ನಡೆಯಿತು.

## ಪ್ರೌಢಶಾಲೆ

### ಶಿಕ್ಷಕರಿಂದ ಶಾಲೆಗೆ ಭೇಟಿ 02.03.2023 & 3.03.2023



ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಗಡಿಯಾರ, ದ.ಕ.ಜಿ.ಪ.ಶಾಲೆ ಬಾಳ್ತಿಲ ಮತ್ತು ದ.ಕ.ಜಿ.ಪ ಹಿರಿಯ ಪ್ರಾಥಮಿಕ ಶಾಲೆ ಕುದ್ರೆಬೆಟ್ಟು ದ.ಕ.ಜಿ.ಪ ಶಾಲೆ ಬೋಂಡಾಲ, ದ.ಕ.ಜಿ.ಪ.ಹಿರಿಯ ಪ್ರಾಥಮಿಕ ಶಾಲೆ ನೆಟ್ಲ, ಎಸ್.ವಿ.ಎಸ್ ಪಾಣೆಮಂಗಳೂರು ಮತ್ತು ದ.ಕ.ಜಿ.ಪ.ಹಿರಿಯ ಪ್ರಾಥಮಿಕ ಶಾಲೆ ಶಂಭೂರು, ದ.ಕ.ಜಿ.ಪ.ಹಿರಿಯ ಪ್ರಾಥಮಿಕ ಶಾಲೆ ನರಿಕೊಂಬು, ದ.ಕ.ಜಿ.ಪ. ಶಾಲೆ ನಾಯಿಲ, ದ.ಕ.ಜಿ.ಪಹಿರಿಯ ಪ್ರಾಥಮಿಕ ಶಾಲೆ ಬೋಳಂತೂರು, ದ.ಕ.ಜಿ.ಪ.ಶಾಲೆ ಕೆಲಿಂಜ, ವೀರಕಂಭ, ಗೋಳ್ತಮಜಲು, ಕಲ್ಲಡ್ಕ, ದ.ಕ.ಜಿ.ಪ.ಹಿರಿಯ ಪ್ರಾಥಮಿಕ ಶಾಲೆ ಶೇರಾ, ದ.ಕ.ಜಿ.ಪ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಬರಿಮಾರು ಶಾಲೆ, ದ.ಕ.ಜಿ.ಪ.ಹಿ.ಮಾ. ಶಾಲೆ ಮಾಣಿ, ದ.ಕ.ಜಿ.ಪ.ಹಿ. ಪ್ರಾಥಮಿಕ ಶಾಲೆ ಸುಭಾಷ್ ನಗರ ಮತ್ತು ಸಂತ ಜೋಸೆಫ್ ಹಿರಿಯ ಪ್ರಾಥಮಿಕ ಶಾಲೆ ಚೇಳೂರು, ದ.ಕ.ಜಿ.ಪ.ಹಿರಿಯ ಪ್ರಾಥಮಿಕ ಶಾಲೆ ಬ್ರಹ್ಮರಕೋಟ್ಲು, ತುಂಬೆ, ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಕೊಡಪದವು ಶಾಲೆ, ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಅನಂತಾಡಿ ಮತ್ತು ನೇರಳಕಟ್ಟೆ ಶಾಲೆಗಳಿಗೆ ಪ್ರೌಢಶಾಲಾ ಅಧ್ಯಾಪಕರು ಸಂಪರ್ಕ ಮಾಡಿ ಸಂಸ್ಥೆಯ ಬಗ್ಗೆ ಮಾಹಿತಿ ನೀಡಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆಗೆ ಆಹ್ವಾನಿಸಿದರು.

### ಭಜನ್ ಸಂಧ್ಯಾ ಕಾರ್ಯಕ್ರಮ 13.3.2023



ವಿಶೇಷ ವಸತಿ ನಿಲಯದ ವಿದ್ಯಾರ್ಥಿಗಳಿಂದ ನಡೆದ ಭಜನ್ ಸಂಧ್ಯಾ ಕಾರ್ಯಕ್ರಮದಲ್ಲಿ ಮುಖ್ಯೋಪಾಧ್ಯಾಯರಾದ ಗೋಪಾಲ. ಎಂ, ಪುರುಷೋತ್ತಮ ಶ್ರೀಮಾನ್, ಪ್ರಶಾಂತ್ ಶ್ರೀಮಾನ್ ನಾಗಲಕ್ಷ್ಮಿ ಮಾತಾಜಿ ಮಧುಶ್ರೀ ಮತಾಜಿ ಉಪಸ್ಥಿತರಿದ್ದರು.

### ದೀಪ ಪ್ರಧಾನ ಕಾರ್ಯಕ್ರಮ 8-3-2023

ಶ್ರೀರಾಮ ಪ್ರೌಢಶಾಲೆಯ ಮಧುಕರ ಸಭಾಂಗಣದಲ್ಲಿ ನಡೆದ ದೀಪ ಪ್ರಧಾನ ಕಾರ್ಯಕ್ರಮದಲ್ಲಿ ಅತಿಥಿ ಅಭ್ಯಾಗತರು ದೀಪ ಪ್ರಜ್ವಲನೆ ಮಾಡುವ ಮೂಲಕ ಚಾಲನೆ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಿವೇಕಾನಂದ ವಿದ್ಯಾವರ್ಧಕ ಸಂಘದ ಪುತ್ತೂರು ಇದರ ಅಧ್ಯಕ್ಷರು ಡಾ| ಪ್ರಭಾಕರ್ ಭಟ್ ವಹಿಸಿದರು. ಇದೇ ವೇಳೆ ಸಾಮಾಜಿಕ ಕಾರ್ಯಕರ್ತೆ ಪ್ರತಿಭಾ ಅರುಣ್ ಗಣಿತ ಪ್ರಯೋಗಾಲಯವನ್ನು ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಪವರ್‌ಪ್ಯಾಕ್ ಇಂಡಸ್ಟ್ರೀಸ್ ಮಂಗಳೂರು ಇದರ ಆಡಳಿತ ನಿರ್ದೇಶಕರಾದ ಪ್ರಜ್ವಲ್.ಪಿ.ಶೆಟ್ಟಿ, ಆತಂರ್ಜಾಲ್ ಪ್ರೈವೆಟ್ ಲಿಮಿಟೆಡ್ ಮಂಗಳೂರು ಇದರ ಆಡಳಿತ ನಿರ್ದೇಶಕರಾದ ಆದಿತ್ಯ ಸ್ವರೂಪ್, ಕರ್ನಾಟಕ ರಾಜ್ಯ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ಉಡುಪಿ ಇದರ ಉಪಾಧ್ಯಕ್ಷರು ಶ್ರೀ.ಎ.ಕಿರಣ್ ಕೊಡ್ಗಿ, ಶ್ರೀಮತಿ ಕಮಲಾ ಪ್ರಭಾಕರ ಭಟ್, ಸಾವಿತ್ರಿ ದೇವಿ ಮೆಮೋರಿಯಲ್ ಟ್ರಸ್ಟ್ ಇದರ ಆಡಳಿತ ನಿರ್ದೇಶಕರು - ವಿಶ್ವಾಸ್. ಯು. ಎಸ್ ರಾವ್, ಶ್ರೀ ನಾರಾಯಣ ಸೋಮಾಯಾಜಿ, ಶ್ರೀ ವಸಂತ ಮಾಧವ, ಶ್ರೀ ರಮೇಶ್ ಎನ್, ಶ್ರೀಮತಿ ಶಾಂಭವಿ ಮಾತಾಜಿ, ಶ್ರೀ ಗೋಪಾಲ್.ಎಂ, ಮತ್ತು ವಿದ್ಯಾ-ಕೇಂದ್ರದ ವಿವಿಧ ವಿಭಾಗಗಳ ಮುಖ್ಯಸ್ಥರು, ವಿದ್ಯಾರ್ಥಿಗಳು, ಶಿಕ್ಷಕರು-ಶಿಕ್ಷಕೇತರ ವೃಂದ, ಮಾಧ್ಯಮ ಮಿತ್ರರು ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ವಿದ್ಯಾರ್ಥಿಗಳಾದ ನಿಖಿತಾ ನಿರೂಪಿಸಿದಳು. ಶ್ರದ್ಧಾ ಸ್ವಾಗತಿಸಿ ಧನ್ಯಶ್ರೀ ವಂದಿಸಿದಳು

### ಹತ್ತನೇ ಪಬ್ಲಿಕ್ ಪರೀಕ್ಷೆ ನಿಮಿತ್ತ ವಿವಿಧ ಶಾಲೆಗಳ ಶಿಕ್ಷಕರ ಸಭೆ 29.03.2023

10ನೇ ತರಗತಿ ಪಬ್ಲಿಕ್ ಪರೀಕ್ಷೆ ನಿಮಿತ್ತ ಕಾರ್ಯ ನಿರ್ವಹಿಸುವ ವಿವಿಧ ಶಾಲೆಗಳ ಶಿಕ್ಷಕರ ಸಭೆ ನಡೆಯಿತು. ಸಭೆಯನ್ನು ಶ್ರೀರಾಮ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಗೋಪಾಲ್.ಎಮ್ ನಡೆಸಿಕೊಟ್ಟರು.

## ಸಕೆಂಡರಿ ಸ್ಕೂಲ್

### ಶೈಕ್ಷಣಿಕ ಮಾಹಿತಿ 01.03.2023

ಮಡಿಕೇರಿ & ಕುಶಾಲನಗರದ ಸುತ್ತಮುತ್ತಲಿನ ಪ್ರೌಢಶಾಲೆಗಳಿಗೆ ತೆರಳಿ ವಿದ್ಯಾರ್ಥಿಗಳಿಗೆ ಶ್ರೀರಾಮ ಸೆಕೆಂಡರಿ ಸ್ಕೂಲ್ ಮತ್ತು ಪದವಿ ಪೂರ್ವ ವಿಭಾಗದ ಶೈಕ್ಷಣಿಕ ಮಾಹಿತಿಯನ್ನು ದೈಹಿಕ ಶಿಕ್ಷಣ ಉಪನ್ಯಾಸಕರಾದ ಕರುಣಾಕರ್ ಮತ್ತು ಸೆಕೆಂಡರಿ ಸ್ಕೂಲ್‌ನ ಉಪಪ್ರಾಚಾರ್ಯರಾದ ತಿರುಮಲೇಶ್ವರ ಪ್ರಶಾಂತ್‌ರವರು ತಿಳಿಸಿದರು.

### ಜಂತುಹುಳು ನಿವಾರಣಾ ಕಾರ್ಯಕ್ರಮ 13.03.2023

ಶ್ರೀರಾಮ ಸೆಕೆಂಡರಿ ಸ್ಕೂಲ್‌ನಲ್ಲಿ ಜಂತುಹುಳು ನಿವಾರಣಾ ಕಾರ್ಯಕ್ರಮವನ್ನು ವಿದ್ಯಾರ್ಥಿಗಳಿಗೆ ಮಾತ್ರೆಯನ್ನು ವಿತರಿಸುವ ಮೂಲಕ ಆಚರಿಸಲಾಯಿತು.

### ಧರ್ಮಸ್ಥಳ ಮಂಜೂಷಾ ವಸ್ತುಸಂಗ್ರಹಾಲಯ ಭೇಟಿ 28.03.2023

ಶ್ರೀರಾಮ ಸೆಕೆಂಡರಿ ಸ್ಕೂಲ್‌ನ ವಿದ್ಯಾರ್ಥಿಗಳು ಶ್ರೀ ಕ್ಷೇತ್ರ ಧರ್ಮಸ್ಥಳಕ್ಕೆ ಭೇಟಿ ನೀಡಿ ಅಲ್ಲಿನ ಮಂಜೂಷಾ ವಸ್ತುಸಂಗ್ರಹಾಲಯ, ಕಾರ್

ಮ್ಯೂಸಿಯಂ, ಬಾಹುಬಲಿ ಮೂರ್ತಿಯನ್ನು ವೀಕ್ಷಿಸಿ ಮಾಹಿತಿಗಳನ್ನು ಪಡೆದುಕೊಂಡರು.

**ಭಜನೆ ಮತ್ತು ಸಾಮೂಹಿಕ ಹುಟ್ಟುಹಬ್ಬದ ಆಚರಣೆ 29.03.23**



ಶ್ರೀರಾಮ ಸೆಕೆಂಡರಿ ಸ್ಕೂಲ್‌ನಲ್ಲಿ ಭಜನೆ ಮತ್ತು ಸಾಮೂಹಿಕ ಹುಟ್ಟುಹಬ್ಬವನ್ನು ಆಚರಿಸಲಾಯಿತು.

**29.03.2023 ಪ್ರೋತ್ಸಾಹ ಭಾಷಣ.**



ಶ್ರೀರಾಮ ಸೆಕೆಂಡರಿ ಸ್ಕೂಲ್‌ನ ವಿದ್ಯಾರ್ಥಿಗಳಿಗೆ ತಮ್ಮ ಮುಂದಿನ ಭವಿಷ್ಯದ ಕುರಿತು ಪ್ರೋತ್ಸಾಹ ಭಾಷಣವನ್ನು ಶ್ರೀರಾಮ ಪದವಿ ಪೂರ್ವ ಕಾಲೇಜು ವಿಭಾಗದ ನಿವೃತ್ತ ಪ್ರಾಂಶುಪಾಲರಾದಂತಹ ಶ್ರೀಯುತ ಮಹಾಬಲೇಶ್ವರ ಭಟ್ ಅವರು ನೆರವೇರಿಸಿದರು. ವ್ಯಕ್ತಿತ್ವ ವಿಕಸನದ ಮಾಹಿತಿ ಶ್ರೀರಾಮ ಸೆಕೆಂಡರಿ ಸ್ಕೂಲ್‌ನಲ್ಲಿ ಉಪನ್ಯಾಸಕರಾಗಿರುವ ಡಾ|| ಶೃತಕೀರ್ತಿ ಇವರು ವಿದ್ಯಾರ್ಥಿಗಳಿಗೆ ವ್ಯಕ್ತಿತ್ವ ವಿಕಸನದ ಕುರಿತು ಮಾಹಿತಿಯನ್ನು ನೀಡಿದರು.

**ಪ್ರೌಢಶಾಲಾ ಭೇಟಿ**



17.03.2023ರಂದು ಸರಕಾರಿ ಪ್ರೌಢಶಾಲೆ ಕೊಯಿಲ. ಇಲ್ಲಿಗೆ ತೆರಳಿ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಶ್ರೀರಾಮ ಪದವಿಪೂರ್ವ ವಿಭಾಗದ ಶೈಕ್ಷಣಿಕ ಮಾಹಿತಿಯನ್ನು ಉಪನ್ಯಾಸಕರಾದ ಅಶೋಕ್ ಕುಮಾರ್ ತಿಳಿಸಿದರು . ಶ್ರೀರಾಮ ಪ್ರಾಥಮಿಕ ವಿಭಾಗದ ಕಛೇರಿ ಸಹಾಯಕರಾದ ಸುಧೀಂದ್ರ ಸಹಕರಿಸಿದರು*.

29/03/2023ರಂದು ಶ್ರೀರಾಮ ಪದವಿ ಪೂರ್ವ ವಿಭಾಗದ ಪ್ರಥಮ ಪಿ.ಯು.ಸಿ ದಾಖಲಾತಿಗೆ ಸಂಬಂಧಿಸಿದಂತೆ ಮೂಡಿಗೆರೆ, ಚಿಕ್ಕಮಂಗಳೂರು, ಕಡೂರು ತಾಲೂಕಿನ ಪ್ರೌಢಶಾಲೆಗೆ ಶ್ರೀ ಕರುಣಾಕರ ಶ್ರೀಮಾನ್ ಭೇಟಿ ನೀಡಿ ಶೈಕ್ಷಣಿಕ ಮಾಹಿತಿಯನ್ನು ನೀಡಿದರು.

## ಪದವಿ

**"Internship formula - A Key of Success" ಕಾರ್ಯಗಾರ 01.03.2023**

ಶ್ರೀರಾಮ ಪ್ರಥಮ ದರ್ಜೆ ಮಹಾವಿದ್ಯಾಲಯದ ವಾಣಿಜ್ಯ ಸಂಘ ಹಾಗೂ IQAC ವತಿಯಿಂದ ಆಯೋಜನೆಯಾದ "Internship formula-A Key of Success" ಎಂಬ ಕಾರ್ಯಾಗಾರ ವನ್ನು ಸಂಪನ್ಮೂಲ ವ್ಯಕ್ತಿಗಳಾಗಿ ಆಳ್ವಾಸ್ ಕಾಲೇಜಿನ ವಾಣಿಜ್ಯ ಶಾಸ್ತ್ರದ ಉಪನ್ಯಾಸಕರಾದ ಶ್ರೀಯುತ ಅಶೋಕ ಕೆ. ಜಿ ಇವರು internship ನ ಮಹತ್ವ , ಕಂಪೆನಿಗಳ ಆಯ್ಕೆ ಹೇಗೆ ಮತ್ತು ವರದಿ ಬರೆಯುವ ವಿಧಾನವನ್ನು ವಿವರಣಾತ್ಮಕ ವಾಗಿ ನಡೆಸಿಕೊಟ್ಟರು. ಈ ಕಾರ್ಯಕ್ರಮ ವನ್ನು ನವಿತ ಅಂತಿಮ ವಾಣಿಜ್ಯ ವಿಭಾಗ ನಿರ್ವಹಿಸಿ, ಪಂಚಮಿ ಅಂತಿಮ ವಾಣಿಜ್ಯ ವಿಭಾಗ ಸ್ವಾಗತಿಸಿ ವಂದಿಸಿದರು. ಈ ಕಾರ್ಯಕ್ರಮದಲ್ಲಿ ಪ್ರಾಂಶುಪಾಲರಾದ ಕೃಷ್ಣ ಪ್ರಸಾದ್ ಅಧ್ಯಕ್ಷತೆ ವಹಿಸಿ, ಉಪನ್ಯಾಸಕರು ಹಾಗೂ ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳು ಪಾಲ್ಗೊಂಡರು.

**"Statistical Economics" ಕಾರ್ಯಾಗಾರದಲ್ಲಿ ಭಾಗಿ ಮಾರ್ಚ್ 03, 04**

ಮಂಗಳೂರು ವಿಶ್ವವಿದ್ಯಾನಿಲಯದ ಅರ್ಥಶಾಸ್ತ್ರ ಅಸೋಸಿಯೇಷನ್ ಮತ್ತು ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಬಲ್ಮಠ, ಮಂಗಳೂರು ಇದರ ಜಂಟಿ ಆಶ್ರಯದಲ್ಲಿ ಮಂಗಳೂರು ವಿಶ್ವವಿದ್ಯಾನಿಲಯ ವ್ಯಾಪ್ತಿಯ ಅರ್ಥಶಾಸ್ತ್ರ ಉಪನ್ಯಾಸಕರಿಗೆ "Statistical Economics" ಎಂಬ ವಿಷಯದ ಕುರಿತು ಎರಡು ದಿನಗಳ ಮಾಹಿತಿ ಕಾರ್ಯಾಗಾರವನ್ನು [Workshop] ಹಮ್ಮಿಕೊಂಡಿದ್ದರು. ಈ ಕಾರ್ಯಾಗಾರದಲ್ಲಿ ಶ್ರೀರಾಮ ಪ್ರಥಮ ದರ್ಜೆ ಕಾಲೇಜಿನ ಅರ್ಥಶಾಸ್ತ್ರ ಉಪನ್ಯಾಸಕಿಯಾದ ಸಂಧ್ಯಾ ಕುಮಾರಿ.ಎಸ್ ಇವರು ಭಾಗವಹಿಸಿದರು.

**ದೇಶದ ಶಿಕ್ಷಣ ವಂಚಿತರ ಮತ್ತು ನಿರುದ್ಯೋಗಿಗಳ ಅಂಕಿ ಅಂಶಗಳ ಸಮೀಕ್ಷೆಯ ಪೂರ್ವಭಾವಿ ತರಬೇತಿ ಸಭೆಯಲ್ಲಿ ಭಾಗಿ:**

ಕೇಂದ್ರ ಸರ್ಕಾರದ ನಿರ್ದೇಶನದಂತೆ ರಾಷ್ಟ್ರೀಯ ಸೇವಾ ಯೋಜನೆಯ ವತಿಯಿಂದ ದೇಶದ ಶಿಕ್ಷಣ ವಂಚಿತರ ಮತ್ತು ನಿರುದ್ಯೋಗಿಗಳ ಅಂಕಿ ಅಂಶಗಳ ಸಮೀಕ್ಷೆಯ ಪೂರ್ವಭಾವಿ ತರಬೇತಿ ಸಭೆಯಲ್ಲಿ ಶ್ರೀರಾಮ ರಾಷ್ಟ್ರೀಯ ಸೇವಾ ಯೋಜನೆಯ ಘಟಕದಿಂದ ಶ್ರೀ ಯತಿರಾಜ್ ಪೆರಾಜೆ ಮತ್ತು ಸಹ ಸಂಯೋಜಕಿ ಕು ದೀಕ್ಷಿತಾ ಭಾಗವಹಿಸಿದರು

**ಹಿರಿಯ ವಿದ್ಯಾರ್ಥಿ ಸಂಘದ ನೋಂದಣಿ**



ನೋಂದಣಿ ಪ್ರಮಾಣ ಪತ್ರ

23/02/2023

:DRDK/SOR/381/2022-2023.

1960 (1960 17)

PANCHAJANYA HIRIYA VIDYARTHI SANGHA SRI RAMA PRATHMA DARJE MAHAVIDHYALAYA KALLADKA D NO 3-32/20, KALLADKA, BANTWALA TALUK BANTVAL - 574222, DAKSHINA KANNADA

500.00/-

23/02/2023

Class of Society :GENERAL

ಶ್ರೀರಾಮ ಪದವಿ ಕಾಲೇಜಿನ ಹಿರಿಯ ವಿದ್ಯಾರ್ಥಿ ಸಂಘವು ಅಧಿಕೃತವಾಗಿ ಅಸ್ತಿತ್ವಕ್ಕೆ ಬಂದಿದೆ. ಪಾಂಚಜನ್ಯ, ಹಿರಿಯ ವಿದ್ಯಾರ್ಥಿ ಸಂಘ ಎಂಬ ಹೆಸರಿನಲ್ಲಿ ಇದು ನೋಂದಣಿಯಾಗಿದ್ದು, ಹಿರಿಯ ವಿದ್ಯಾರ್ಥಿಗಳಾದ ಶ್ರೀ ರಾಜೇಶ್ ನರಿಂಗಾಣ ಅಧ್ಯಕ್ಷರಾಗಿ, ಶ್ರೀ ಶಿವಪ್ರಸಾದ ಸುಧೆಕ್ಕಾರ್ ಕಾರ್ಯದರ್ಶಿಯಾಗಿ ಮತ್ತು ಶ್ರೀ ಜಗದೀಶ ಕೋಶಾಧಿಕಾರಿಯಾಗಿ ಜೊತೆಗೆ ಇನ್ನಿತರ ಮಹಿಳಾ ಪ್ರತಿನಿಧಿಗಳು ಸೇರಿ 13 ಮಂದಿ ಈ ಸಂಘದಲ್ಲಿ ಪದಾಧಿಕಾರಿಗಳಾಗಿ ಆಯ್ಕೆಯಾಗಿದ್ದಾರೆ.

## ಪದವಿ ಪೂರ್ವ



**ಪೋಷಕರ ಸಭೆ 6.3.23:** ಪ.ಪೂ. ವಿಜ್ಞಾನ ವಿಭಾಗದ ಪೋಷಕರ ಸಭೆಯಲ್ಲಿ ಶ್ರೀ ವಸಂತ ಮಾಧವ ವಿಶೇಷ ತರಗತಿಯ ಮಹತ್ವ ಹಾಗೂ ನಿರಂತರ ಕಲಿಕೆಯ ಪ್ರಯೋಜನದ ಬಗ್ಗೆ ತಿಳಿಸಿದರು. ಶ್ರೀ ವಸಂತ ಬಲ್ಲಾಳ್ ವಿಶೇಷ ತರಗತಿಯ ಮಾಹಿತಿ ನೀಡಿ, ಗಣಿತಶಾಸ್ತ್ರ ಉಪನ್ಯಾಸಕಿ ಶ್ರೀಮತಿ ಜಯಲಕ್ಷ್ಮಿ ಕೆ. ಕಾರ್ಯಕ್ರಮ ನಿರ್ವಹಿಸಿದರು.



**ಪ್ರೌಢಶಾಲೆಗೆ ಭೇಟಿ 29.03.2023:**


ಶ್ರೀರಾಮ ಪದವಿ ಪೂರ್ವ ವಿಭಾಗದ ಪ್ರಥಮ ಪಿಯುಸಿ ದಾಖಲಾತಿಗೆ ಸಂಬಂಧಿಸಿದಂತೆ ಮೂಡಿಗೆರೆ, ಚಿಕ್ಕಮಂಗಳೂರು, ಕಡೂರು ತಾಲೂಕಿನ ಪ್ರೌಢಶಾಲೆಗೆ ಶ್ರೀ ಕರುಣಾಕರ ಶ್ರೀಮಾನ್ ಭೇಟಿ ನೀಡಿ ಶೈಕ್ಷಣಿಕ ಮಾಹಿತಿಯನ್ನು ನೀಡಿದರು.



**ಭಜನಾ ಕಾರ್ಯಕ್ರಮ 30/03/23**

ಶ್ರೀರಾಮ ನವಮಿ ಪ್ರಯುಕ್ತ ಕಲ್ಲಡ್ಕ ಶ್ರೀರಾಮ ಮಂದಿರದಲ್ಲಿ ಪದವಿ ಪೂರ್ವ ವಿಭಾಗದ ವಿದ್ಯಾರ್ಥಿಗಳು ಭಜನಾ ಕಾರ್ಯಕ್ರಮವನ್ನು ನೆರವೇರಿಸಿಕೊಟ್ಟರು. ಈ ಜವಾಬ್ದಾರಿಯನ್ನು ವಾಣಿಜ್ಯ ಉಪನ್ಯಾಸಕರಾದ ಶ್ರೀ ನಾಗರಾಜ್ ಇವರು ವಹಿಸಿದ್ದರು.

## ಪದವಿ



**"ಬಲಿದಾನ್ ದಿವಸ್" 24.03.2023** ಮಾನವಿಕ ಸಂಘದಿಂದ ಆಯೋಜಿಸಲಾದ "ಬಲಿದಾನ್ ದಿವಸ್"ನಲ್ಲಿ ಅಳಿಕೆ ಪ.ಪೂ ವಿದ್ಯಾಲಯದ ಇತಿಹಾಸ ಉಪನ್ಯಾಸಕರಾದ ಶ್ರೀ ಧನಂಜಯ್ ಮಾತನಾಡಿದರು. ಶ್ರೀ ಕೃಷ್ಣಪ್ರಸಾದ್ ಶ್ರೀಮಾನ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕು. ಧನ್ಯ ಶ್ರೀ ಪ್ರಥಮ ಬಿ ಎ ಸ್ವಾಗತಿಸಿ, ಕು. ಚೈತ್ರಾ ಪ್ರಥಮ ಬಿ ಎ ವಂದಿಸಿ, ಕು. ವರ್ಷಿತಾ ಅಂತಿಮ ಬಿ ಎ ನಿರೂಪಿಸಿದರು.



**ಕಾರ್ಯಾಗಾರ 29.03.2023:** ವಾಣಿಜ್ಯ ವಿಭಾಗ, ಉದ್ಯೋಗ ಮತ್ತು ವೃತ್ತಿ ಮಾರ್ಗದರ್ಶನ ಕೋಶದ ವತಿಯಿಂದ ಕೌಶಲ ಅಭಿವೃದ್ಧಿಗಾಗಿ "Personal Financial Management" ಕಾರ್ಯಾಗಾರ ನಡೆಯಿತು. MSNIM ಮಂಗಳೂರು ಕಾಲೇಜಿನ ಸಹ ಪ್ರಾಧ್ಯಾಪಕ ಹಾಗೂ ಅಂತರರಾಷ್ಟ್ರೀಯ ಸಂಬಂಧಗಳ ವಿಭಾಗದ ಮುಖ್ಯಸ್ಥ ಡಾ. ಶ್ರವಣ್ ಕುಮಾರ್ ಶೆಟ್ಟಿ ಉದ್ಘಾಟಿಸಿ ತರಬೇತಿ ನೀಡಿದರು.



**(12.3.23)** ಕರ್ನಾಟಕ ಗಮಕ ಕಲಾ ಪರಿಷತ್ (ರಿ) ಬೆಂಗಳೂರು, ದ.ಕ.ಜಿಲ್ಲೆ, ಹಾಗೂ ಬಂ. ತಾ. ಪರಿಷತ್ ಇದರ ಜಂಟಿ ಆಶ್ರಯದಲ್ಲಿ ಬಂ.ತಾಲೂಕು ದ್ವಿತೀಯ ಗಮಕ ಸಮ್ಮೇಳನವು ಲಯನ್ಸ್ ಸೇವಾ ಮಂದಿರ, ಬಿ.ಸಿ.ರೋಡ್‌ನ ದಿ। ಚಂದ್ರಶೇಖರ ಕೆದಿಲಾಯ ವೇದಿಕೆಯಲ್ಲಿ ನಡೆಯಿತು.ಈ ಸಮ್ಮೇಳನದಲ್ಲಿ ಶ್ರೀರಾಮ ಪ್ರಥಮ ದರ್ಜೆ ಕಾಲೇಜಿನ ಬಿ.ಎ ವಿದ್ಯಾರ್ಥಿನಿ ಕು.ಪದ್ಮಶ್ರೀ ಇವರು ಭಾಗವಹಿಸಿರುತ್ತಾರೆ.

### ಪ್ರತಿಭಾ ಪ್ರದರ್ಶನ – ಯಕ್ಷಗಾನ ರಂಗ ಪ್ರವೇಶ 31.3.2023:

2022–23ನೇ ಶೈಕ್ಷಣಿಕ ವರ್ಷಕ್ಕೆ ಸಂಬಂಧಿಸಿ 1 ರಿಂದ 7ನೇ ತರಗತಿಯ ವಿದ್ಯಾರ್ಥಿಗಳಿಗೆ ತಾವು ಶಾಲೆಯಲ್ಲಿ ಕಲಿತ ಕಲಾಪ್ರಕಾರಗಳಾದ ಸಂಗೀತ, ಹಾರ್ಮೋನಿಯಂ, ಭರತನಾಟ್ಯ, ನಾಟಕ ಹಾಗೂ ನೃತ್ಯಗಳ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ವಿಶೇಷವಾಗಿ ಕಳೆದೊಂದು ವರ್ಷದಿಂದ ಯಕ್ಷಗಾನ ತರಬೇತಿ ಪಡೆಯುತ್ತಿದ್ದ ತಂಡ ರಂಗಪ್ರವೇಶ ಮಾಡಿತ್ತು. 'ಯಕ್ಷಾಮೃತ' (ಯಕ್ಷಗಾನ ನಾಟ್ಯ ತರಗತಿ) ವತಿಯಿಂದ ನಡೆದ ಈ ವೇದಿಕೆಯಲ್ಲಿ ಪ್ರಾಥಮಿಕ ವಿಭಾಗದ ವಿದ್ಯಾರ್ಥಿಗಳಿಂದ **ನರಕಾಸುರ ಮೋಕ್ಷ** ಎಂಬ ಯಕ್ಷಗಾನ ಪ್ರಸಂಗ ನಡೆಯಿತು. ಈ ಕಾರ್ಯಕ್ರಮಕ್ಕೆ ವಿದ್ಯಾಸಂಸ್ಥೆಯ ಹಿರಿಯರಾದ ಡಾ। ಪ್ರಭಾಕರ್ ಭಟ್ ಕಲ್ಲಡ್ಕ ಸಾಕ್ಷಿಯಾದರು.











## ಶ್ರೀರಾಮ ಶಿಶುಮಂದಿರ – ಮಾತೃಪೂಜನ ಹಾಗೂ ಮಾತೃಭೋಜನ ಕಾರ್ಯಕ್ರಮ 18.03.2023

ಶ್ರೀರಾಮ ಶಿಶುಮಂದಿರದಿಂದ 1ನೇ ತರಗತಿಗೆ ಸೇರ್ಪಡೆಯಾಗುವ ಮಕ್ಕಳಿಗೆ ಹಾಗೂ ಪಾಲಕರಿಗಾಗಿ ಸೀತಾರಸೋಯಿಯಲ್ಲಿ ಆಯೋಜಿಸಲಾದ ವಿಶೇಷ ಕಾರ್ಯಕ್ರಮ ಮಾತೃಪೂಜನ ಹಾಗೂ ಮಾತೃ ಭೋಜನ. ಅಂದು ಮಕ್ಕಳು ಮಾತೆಯರ ಪಾದ ತೊಳೆದು ಅರಶಿನ ಕುಂಕುಮ ಹಚ್ಚಿ, ಹೂವು ಹಾಕಿ





ನಮಸ್ಕರಿಸಿದ ನಂತರ ತಾಯಂದಿರು ಮಕ್ಕಳಿಗೆ ಅಕ್ಷತೆ ಹಾಕಿ ಸಿಹಿ ತಿನ್ನಿಸಿ ಆಶೀರ್ವದಿಸಿದರು. ಈ ಭಾವನಾತ್ಮಕ ಕಾರ್ಯಕ್ರಮವನ್ನು ಎಲ್ಲರೂ ಖುಷಿಪಟ್ಟರು. ಮಾರ್ಗದರ್ಶಕರಾಗಿ ಡಾ। ಪ್ರಭಾಕರ್ ಭಟ್ ಕಲ್ಲಡ್ಕ ಮತ್ತು ವಿದ್ಯಾಕೇಂದ್ರದ ಸಂಚಾಲಕರಾದ ಶ್ರೀ ವಸಂತ ಮಾಧವ ಶ್ರೀಮಾನ್ ಉಪಸ್ಥಿತರಿದ್ದರು.


ಶ್ರೀರಾಮ ವಿದ್ಯಾಕೇಂದ್ರ
ಹನುಮಾನ್ ನಗರ ಕಲ್ಲಡ್ಕ 574222

**2023–24ನೇ ಶೈಕ್ಷಣಿಕ ವರ್ಷದಿಂದ ಆರಂಭ**

**ನರ್ಸರಿ ಟೀಚರ್ ಟ್ರೈನಿಂಗ್ ಕೋರ್ಸ್**

**ದಾಖಲಾತಿ ಆರಂಭಗೊಂಡಿದೆ**

ವಿವರಗಳಿಗೆ ಸಂಪರ್ಕಿಸಿ
**9964280734**

ಶ್ರೀರಾಮ ವಿದ್ಯಾಕೇಂದ್ರ
ಹನುಮಾನ್ ನಗರ ಕಲ್ಲಡ್ಕ 574222

**ವಿವಿಧ ವಿಭಾಗಗಳ ದಾಖಲಾತಿ ಆರಂಭಗೊಂಡಿದೆ**

ಶ್ರೀರಾಮ ಶಿಶುಮಂದಿರ (3ವರ್ಷ ಮೇಲ್ಪಟ್ಟು) – 9141030978, 8971115931
ಶ್ರೀರಾಮ ಪ್ರಾಥಮಿಕ ಶಾಲೆ (1ರಿಂದ 7) – 9141030979, 9964282456
ಶ್ರೀರಾಮ ಪ್ರೌಢಶಾಲೆ (8ರಿಂದ10) – 9141030980, 9482189419
ಶ್ರೀರಾಮ ಇಂಗ್ಲೀಷ್ ಮೀಡಿಯಂ ಸ್ಕೂಲ್(9&10) – 7760345977, 8618030395
ಶ್ರೀರಾಮ ಪದವಿಪೂರ್ವ ವಿದ್ಯಾಲಯ– 9141030981, 9449579959
ಶ್ರೀರಾಮ ಪದವಿ ವಿದ್ಯಾಲಯ – 9141030982, 9964280734
ಶ್ರೀರಾಮ ವಸತಿ ನಿಲಯ – 9141030983, 9141030984

ಶುಭಕೋರುವ :
**ಶ್ರೀರಾಮ ಸೌಹಾರ್ದ ಸಹಕಾರಿ ನಿಯಮಿತ**
ಪ್ರಧಾನ ಕಚೇರಿ: ಹನುಮಾನ್ ನಗರ ಕಲ್ಲಡ್ಕ ಬಂಟ್ವಾಳ ತಾಲೂಕು 574222 ದೂ: 08255 275173, 275373
ಶಾಖೆ : ಶ್ರೀರಾಮ ವಾಣಿಜ್ಯ ಸಂಕೀರ್ಣ ರಾಮನಗರ ಕಲ್ಲಡ್ಕ

ಕಲ್ಲಡ್ಕ ಶ್ರೀರಾಮ ವಾಣಿಜ್ಯ ಸಂಕೀರ್ಣದ ರಾಮ ನಗರ ಶಾಖೆಯಲ್ಲಿ E-Stamping ಠಸೆ ಕಾಗದ ಸೌಲಭ್ಯವಿದೆ

ಸಾಲ ಸೌಲಭ್ಯಗಳು
ಚಿನ್ನಾಭರಣ ಸಾಲ – 10.5%
ಜಾಮೀನು ಸಾಲ – 16%
ಅಡವು ಸಾಲ – 13%
ವಾಹನ ಸಾಲ – 11.5%
ಗೃಹ ನಿರ್ಮಾಣ ಸಾಲ – 11%

ಠೇವಣಿ ಮೇಲೆ ಆಕರ್ಷಕ ಬಡ್ಡಿ ದರಗಳು
91ದಿನಗಳವರೆಗೆ – 7%
92ರಿಂದ 181 ದಿನಗಳು – 7.5%
182 ರಿಂದ 364 ದಿನಗಳು – 8.5%
1 ವರ್ಷ ಮತ್ತು ಮೇಲ್ಪಟ್ಟು – 9%

ಸೌಲಭ್ಯ
ಆವರ್ತನ ಠೇವಣಿ (R.D)
ಸಂಚಯ ಠೇವಣಿ (S.D)
ನಿರಂತರ ಠೇವಣಿ (ಪಿಗ್ಮಿ)

ಹಿರಿಯ ನಾಗರಿಕರಿಗೆ ಮಾಜಿ ಯೋಧರಿಗೆ ಮತ್ತು ವಿಧವೆಯರಿಗೆ 0.5% ಬಡ್ಡಿ ಹೆಚ್ಚಿಗೆ ನೀಡಲಾಗುವುದು.



Postal Regn No. PTR/136/2022-24 Licensed to Post without pre-payment License No: SK/WPP/PTR/117/2022-24

ಸರಯೂ
Vol. : 9 Issue :11 Rs. 10/-

KARKAN/2014/62363
Posted at Kalladka P.O. on 10th and 15th of Every month

SRI RAMA VIDYAKENDRA TRUST (R.) Hanuman Nagar, Kalladka, Bantwal Tq., Dakshina Kannada, Karnataka 574 222
Website : www.shriramakalladka.in / www.srvk.org E-mail : info@srvk.org


BOOK POST

ಸವಿಧೇ,


Sarayu Kannada Monthly Edited and Published and Printed by B. Narayana Somayaji on behalf of Sri Rama Vidyakendra Trust, Hanuman Nagara, Kalladka, Bantwal Tq, Dakshina Kannada - 574 222. Phone : 9449728763 Printed at Digantha Mudrana Ltd. Magaluru 575008, Bantwal Tq., Dakshina Kannada, Karnataka. Registration No. : KARKAN/2014/62363